# ದಿವ್ಯತ್ರಯರ ಸಂದೇಶಗಳಿಂದ ನನ್ನ ಜೀವನದ ಮೇಲೆ ಆಗಿರುವ ಪ್ರಭಾವ

ಜೀವಾಜಿ ಜೋಷಿ

ಜೀವನವೆಂದರೆ ಸಮಸ್ಯೆಗಳ ಸರಣಿ. ದಿವ್ಯತ್ರಯರ ಸಂದೇಶಗಳ ಸಹಾಯದಿಂದ ಪ್ರಭಾವಿತರಾಗಿ ಹೇಗೆ ಮನಃಶಾಂತಿಯನ್ನು ಕಂಡುಕೊಳ್ಳಬೇಕೆಂದು ಈ ಅಂಕಣದ ಮೂಲಕ ಲೇಖಕರು ತಿಳಿಸುತ್ತಿದ್ದಾರೆ.

ದೂರವಾಣಿ ಇಲಾಖೆಯ (ಈಗ BSNL) ನಿವೃತ್ತ ನೌಕರನಾದ ನಾನು ನೆಮ್ಮದಿಯ ಜೀವನ ನಡೆಸುತ್ತಿದ್ದೇನೆ. ಓದು, ಸಂಗೀತ, ಸಾಹಿತ್ಯ ಹಾಗೂ ತೀರ್ಥಯಾತ್ರೆ ನನ್ನ ಹವ್ಯಾಸಗಳು. ದಿವ್ಯತ್ರಯರ ಕೃಪಾಶೀರ್ವಾದದಿಂದ ನನ್ನ ಬಾಳು ಬೆಳಕು ಕಂಡಿದೆ.

ಒಂದು ಕಾಲದಲ್ಲಿ ನನ್ನ ಜೀವನದಲ್ಲಿ ಒಂದು ಸಮಸ್ಯೆ ಎದುರಾದಾಗ ಪೂಜ್ಯ ಸ್ವಾಮಿಜಿಯವರಿಗೆ ಪತ್ರ ಬರೆದಿದ್ದೆ. ಅವರಿಂದ ಸಾಂತ್ವನಕರ ಆಶೀರ್ವಚನ ಉತ್ತರ ಬಂದಿತು. ಸಮಸ್ಯೆ ತಾನಾಗಿಯೇ ಸುಖಾಂತ್ಯ ಕಂಡಿತು. ಸ್ವಾಮಿಜಿಯವರ ಉತ್ತರದಲ್ಲಿ **ಉದ್ಧರೇತ್ ಆತ್ಮನಾತ್ಮಾನಂ** ಎಂಬ ಸಂದೇಶ ಸೂಚಿತವಾಗಿದೆ. 'ವಿವೇಕಪ್ರಭ' ಓದುಗರಿಗೆ ಇದರಿಂದ ಪ್ರಯೋಜನವಾದೀತೆಂಬ ಭರವಸೆಯಿಂದ ನಾನು ಬರೆದ ಪತ್ರ ಹಾಗೂ ಸ್ವಾಮಿಜಿಯವರ ಉತ್ತರ ಎರಡನ್ನೂ ಯಥಾವತ್ತಾಗಿ ಉಲ್ಲೇಖಿಸುತ್ತಿದ್ದೇನೆ.

## ಸಮಸ್ಯೆಯ ಪತ್ರ

**ಹುಬ್ಬಳ್ಳಿ, ನವನಗರ**
**೫ ಸೆಪ್ಟೆಂಬರ್, ೧೯೭೧**

ಪರಮಪೂಜ್ಯ ಸ್ವಾಮಿ ಶಾಂಭವಾನಂದಜಿ ಮಹಾರಾಜ್ ಅವರಿಗೆ ಭಕ್ತಿಪೂರ್ವಕ ಪ್ರಣಾಮಗಳು.

ಜಗಜ್ಜನನಿಯ ಕೃಪೆಯಿಂದ, ಗುರುದೇವರ ಅಮೃತವಾಣಿಯಿಂದ ನನ್ನ ಬಾಳು ಕತ್ತಲೆಯಿಂದ ಬೆಳಕನ್ನು ಕಾಣುತ್ತಿದೆ. ನಾನೊಬ್ಬ ಸರಕಾರಿ ನೌಕರ. ತಕ್ಕಮಟ್ಟಿಗೆ ಆಧ್ಯಾತ್ಮಿಕ ವಿಚಾರಗಳಲ್ಲಿ ಒಲವು ಇದೆ. ಆದರೆ ಕೆಲವು ಆಂತರಿಕ ಸಮಸ್ಯೆಗಳಿಂದಾಗಿ ನನ್ನ ಮನಃಶಾಂತಿ ಕದಡಿದೆ. ನನಗೆ ತಮ್ಮ ಸಹಾಯ ಅಗತ್ಯವೆನಿಸಿದೆ. ಆಶ್ರಮದ ಆಧ್ಯಾತ್ಮಿಕ ಪರಿಸರದಲ್ಲಿ ನನ್ನ ಬಾಳು ಮತ್ತೆ ಚೈತನ್ಯವನ್ನು ಪಡೆದೀತು ಎಂಬ ನಂಬಿಕೆ ನನಗಿದೆ. ನಾನು ಕೆಲದಿನ (ಒಂದು ತಿಂಗಳು) ತಮ್ಮ ಆಶ್ರಮದಲ್ಲಿರಲು ಸಾಧ್ಯವೇ? ತಾವು ಕೃಪೆದೋರಿ ಆಶ್ರಯವಿತ್ತರೆ ನಾನು ಆಶ್ರಮದ ನಿಯಮಗಳಿಗೆ ಬದ್ಧನಾಗಿ ಇರುತ್ತೇನೆಂದು ತಿಳಿಸುವೆ. ಆದರಪೂರ್ವಕ ನಮಸ್ಕಾರಗಳು.

ಧನ್ಯವಾದಗಳೊಂದಿಗೆ,

ತಮ್ಮ ವಿಧೇಯ
ಜೀವಾಜಿ ಜೋಶಿ

## ಸಮಾಧಾನಕರ ಉತ್ತರ

ಶ್ರೀರಾಮಕೃಷ್ಣ ಆಶ್ರಮ
ಮೈಸೂರು
೧೨ .೯. ೭೧

ಶ್ರೀಯುತ ಜೋಶಿಯವರಿಗೆ ಭಗವಂತನ ಸ್ಮರಣೆಗಳು.

ನಿಮ್ಮ ೫ನೇ ತಾರೀಖಿನ ಕಾಗದ ತಲುಪಿದೆ. ನಿಮಗೆ ಆಧ್ಯಾತ್ಮಿಕ ಒಲವು ಇದೆ ಎಂಬುದನ್ನು ತಿಳಿದು ಸಂತೋಷವಾಯಿತು. ನಮ್ಮ ಆಶ್ರಮದಲ್ಲಿ ವಸತಿಯ ಅನುಕೂಲತೆಗಳಿಲ್ಲದಿರುವುದರಿಂದ ನಿಮಗೆ ಇಲ್ಲಿರಲು ಅವಕಾಶ ದೊರೆಯದು. **ನೆಲದ ಮೇಲೆ ಬಿದ್ದಾಗ ನೆಲವನ್ನೇ ಆಧರಿಸಿ ಮೇಲೇಳುವಂತೆ ನಿಂತ ಸ್ಥಾನದಲ್ಲೇ ನಿಂತು ಆಂತರಿಕ ಪ್ರಾರ್ಥನೆಯಿಂದ, ಸದ್ಗ್ರಂಥಗಳ ಅಧ್ಯಯನದಿಂದ ಮನಸ್ಸನ್ನು ದೃಢಪಡಿಸಿಕೊಳ್ಳಬೇಕು.** ಭಗವಂತನು ಸರ್ವಶಕ್ತ. ಅವನಿಗೆ ಮನುಷ್ಯರ ಹೃದಯದ ಆಂತರಿಕ ಪ್ರಾರ್ಥನೆ ತಿಳಿಯುತ್ತದೆಂದು ಪರಮಹಂಸರು ಹೇಳಿದರಲ್ಲವೇ? ಕಷ್ಟನಷ್ಟಗಳ ಮಧ್ಯದಲ್ಲೇ ಭಗವಂತನನ್ನು ಕರೆಯುವಂತಾಗಲಿ. ದೇವರು ನಿಮಗೆ ಶುಭವನ್ನುಂಟುಮಾಡಲಿ.

ಇತಿ

*ಸ್ವಾಮಿ ಜಗದಾತ್ಮಾನಂದ*

**P.S.** ಸ್ವಾಮಿ ಶಾಂಭವಾನಂದಜಿಯವರು ಅಸೌಖ್ಯದಲ್ಲಿದ್ದ ಕಾರಣ ಅವರ ಹೇಳಿಕೆಯಂತೆ ಈ ಪತ್ರ ಬರೆಯಲಾಗಿದೆ.